**ಅಸಲು ದಾವಾ ಸಂಖ್ಯೆ 2 /2013**

**ಪಿ.ಡಬ್ಲ್ಯೂ: 1**

**ಸಾಕ್ಷಿಯನ್ನು ದಿನಾಂಕ 10.12.2025 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು**

**ಮುಂದುವರೆದ ಪಾಟಿ ಸವಾಲುಃ ಶ್ರೀ ಆರ್ ಪಿಃ ವಕೀಲರುಃ ಪ್ರತಿವಾದಿ ಪರವಾಗಿಃ**

11. ಗಡಿಗಿ ಷಡಕ್ಷರಪ್ಪ ರವರು ತಮ್ಮ ವಂಶದ ಸಾರ್ವಜನಿಕ ಟ್ರಸ್ಟ ಮಾಡಿರಲಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿಯು ಸರ್ವೋಚ್ಚ ನ್ಯಾಯಾಲಯದ ಆದೇಶದ ಮೇರೆಗೆ ನಾವು ಸಾರ್ವಜನಿಕ ಟ್ರಸ್ಟ ಎಂದು ಹೇಳುತ್ತಿದ್ದು, ನಾವು ಖಾಸಗಿ ಟ್ರಸ್ಟ ಎಂದು ಕ್ಲೈಮ್ ಮಾಡಿದ್ದೆವು ಎಂದು ನುಡಿಯುತ್ತಾರೆ. ಗಡಿಗಿ ಪಂಪಣ್ಣ ಮತ್ತು ಮಾರಪ್ಪ ರವರು ಟ್ರಸ್ಟ ಅಸ್ತಿತ್ವಕ್ಕೆ ತಂದಿಲ್ಲ ಮತ್ತು ಮಠ ಕಟ್ಟಿಲ್ಲ ಎನ್ನುವುದು ಸರಿಯಲ್ಲ.

**12.** ದಿಃ 25.11.1872 ಮತ್ತು ದಿಃ25.4.1873 ರಂದು ಪಂಪಣ್ಣ ಮತ್ತು ಮಾರಪ್ಪ ರವರು ಕರಾರು ಬರೆದು ಕೊಟ್ಟಿದ್ದು ಆಸ್ತಿಯ ಬಗ್ಗೆ ಪಾಲುಪಾರಿಕೆ ಮಾಡಿಕೊಂಡಿದ್ದು ದಾವೆಯಲ್ಲಿ ಹೇಳಿದ ಮಠವು ನಮ್ಮ ವಂಶಸ್ತರಿಗೆ ಸೇರಿದ್ದಲ್ಲ ಎನ್ನುವುದು ಸರಿಯಲ್ಲ. ಮಣ್ಣೂರು ಕೊಟ್ರ ಸ್ವಾಮಿಯವರು ಮಠ ಕಟ್ಟಿದ್ದಾರೆ ಎನ್ನುವುದು ಸರಿಯಲ್ಲ.

**13**. ಮಣ್ಣೂರು ಕೊಟ್ರ ಸ್ವಾಮಿ ರವರು ಲಿಂಗೈಕ್ಯ ಆದ ನಂತರ ಚನ್ನಬಸಪ್ಪ ರವರನ್ನು ನೇಮಕ ಮಾಡಿಕೊಂಡ ಬಗ್ಗೆ ದಾಖಲೆ ಇಲ್ಲ. ನಮ್ಮ ವಂಶಸ್ತರ ಟ್ರಸ್ಟ ಇಲ್ಲದೇ ಇರುವುದರಿಂದ ಮಣ್ಣೂರು ಕೊಟ್ರ ಸ್ವಾಮಿ ರವರು ಮಾಡಿದ ಟ್ರಸ್ಟನ ಮೂಲಕ ಚನ್ನಬಸಪ್ಪ ರವರನ್ನು ನೇಮಕ

ಮಾಡಿಕೊಳ್ಳಲಾಗಿದೆ ಎನ್ನುವುದು ಸರಿಯಲ್ಲ. ಗಜದಂಡಯ್ಯ ತೀರಿಕೊಂಡ ನಂತರ ಆತನ ಸಹೋದರ ಆನುಮೂರ್ತಿ ರವರನ್ನು ನೇಮಕ ಮಾಡಿದ ಬಗ್ಗೆ ದಾಖಲೆ ಇಲ್ಲ. ಭೋಗಯ್ಯ ರವರನ್ನು ನಾವು ನೇಮಕಾತಿ ಮಾಡಿಲ್ಲ. ಭೋಗಯ್ಯನ ವಂಶಸ್ತರೆ ಅವರನ್ನು ಕರೆದುಕೊಂಡು ಬಂದಿದ್ದಾರೆ. ಶಿವಮೂರ್ತಿ, ಭೋಗಯ್ಯ , ಗುರುಮೂರ್ತಿ ಮತ್ತು ಗಜಗಂಡಯ್ಯ ರವರು ಮಠದ ಆಸ್ತಿಯನ್ನು ದುರುಪಯೋಗ ಮಾಡಿದ ಬಗ್ಗೆ ನನ್ನ ಮುತ್ತಾತ ಚಿಕ್ಕವೀರಪ್ಪ ರವರು ಕಾನೂನು ಕ್ರಮ ಜರುಗಿಸಿರುತ್ತಾರೆ.

**14.** ನನ್ನ ಅಜ್ಜ ಚಿಕ್ಕವೀರಪ್ಪ ರವರು ದಾವಾ ಆಸ್ತಿಗಳು ಖಾಸಗಿ ಟ್ರಸ್ಟ ನ ಆಸ್ತಿ ಎಂದು ದಾವೆ ನಂಃ848/1966 ಯಲ್ಲಿ ಹೇಳಿದ್ದರು ಎನ್ನುವು ದು ಸರಿ . ಸದರಿ ಪ್ರಕರಣದಲ್ಲಿ ನನ್ನ ಅಜ್ಜ ದಾವಾ ಆಸ್ತಿಗಳು ಖಾಸಗಿ ಟ್ರಸ್ಟನ ಆಸ್ತಿ ಎಂದು ಪ್ರತಿಪಾದಿಸಿದ್ದರು. ಸರ್ವೋಚ್ಚ ನ್ಯಾಯಾಲಯವು ಆದೇಶದಲ್ಲಿ ದಾವಾ ಆಸ್ತಿಗಳು ಸಾರ್ವಜನಿಕ ಟ್ರಸ್ಟನ ಆಸ್ತಿ ಎಂದು ಹೇಳಿದ ನಂತರ ನಾವು ನಮ್ಮ ಖಾಸಗಿ ಟ್ರಸ್ಟನ್ನು ಸಾರ್ವಜನಿಕ ಆಸ್ತಿ ಎಂದು ಪರಿಗಣಿಸಬೇಕು ಎಂದು ಯಾವುದೇ ನ್ಯಾಯಾಲಯದಲ್ಲಿ ಅರ್ಜಿಯನ್ನು ಸಲ್ಲಿಸಿಲ್ಲ.

**15.** ದಾವಾ ಐಟಂ ನಂಃ2 ಟಿಎಸ್ ನಂಃ643/1 ರಿಂದ 4 ಆಸ್ತಿಯನ್ನು ಪ್ರತಿವಾದಿ 2 ರಿಂದ 4 ಮತ್ತು ಅವರ ವಾರಸುದಾರರು ಮಾರಾಟ ಮಾಡಿದ್ದಾರೆ ಎನ್ನುವುದು ಸರಿಯಲ್ಲ. ಸಾಕ್ಷಿಯುಸ್ವತಃ ನುಡಿಯುತ್ತಾರೆ ಬಾಡಿಗೆಗೆ ಕೊಟ್ಟಿರುತ್ತಾರೆ. ದಾವಾ ಐಟಂ ನಂಃ2 ರಲ್ಲಿ ಇರುವ ಆಸ್ತಿಯಲ್ಲಿ ಸುಮಾರು 100 ಮನೆಗಳು ಬಂದಿವೆ ಎನ್ನುವುದು ಸರಿಯಲ್ಲ. ಸದರಿ ಆಸ್ತಿಯಲ್ಲಿ ಎಪಿಎಂ ಸಿ ಯಾರ್ಡ ಮತ್ತು ಪೆಟ್ರೋಲ್ ಬಂಕ್ ಇದೆ ಎನ್ನುವುದು ಸರಿ . ಎಪಿಎಂಸಿ ಯಾರ್ಡ

ರವರನ್ನಾಗಲಿ ಪೆಟ್ರೋಲ್ ಬಂಕ್ ಮಾಲೀಕರನ್ನಾಗಲಿ ಈ ದಾವೆಯಲ್ಲಿ ಪಾರ್ಟಿಯನ್ನಾಗಿ ಮಾಡಿಲ್ಲ.

**16**. ದಾವಾ ಆಸ್ತಿ ಐಟಂ ನಂಃ1 ರಲ್ಲಿ ಪ್ರತಿವಾದಿ 5 ರಿಂದ 24 ರವರು ವಾಸಿಸುತ್ತಿದ್ದಾರೆ ಎನ್ನುವುದು ಸರಿ . ನಮ್ಮ ಕುಟುಂಬದ ಟ್ರಸ್ಟ ಗೆ ನಾವು ಸಾರ್ವಜನಿಕ ಟ್ರಸ್ಟ ಎಂದು ನಾಮಾಂಕಿತ ಮಾಡಿಲ್ಲ. ಸಾಕ್ಷಿಯು ಸ್ವತಃ ನುಡಿಯುತ್ತಾರೆ ಮಣ್ಣೂರು ಕೊಟ್ರ ಸ್ವಾಮಿ ವಂಶಸ್ತರು ಅದನ್ನು ಸ್ವಾಧೀನಪಡಿಸಿಕೊಂಡಿದ್ದಾರೆ. ಪ್ರತಿವಾದಿ 5 ರಿಂದ 24 ರವರು ವಾಸಿಸುವ ಸ್ಥಳಕ್ಕೆ ಮಣ್ಣೂರು ಕೊಟ್ರಸ್ವಾಮಿಮಠ ಎಂದು ಕರೆಯುತ್ತಾರೆ ಎನ್ನುವುದು ಸರಿಯಲ್ಲ. ಸಾಕ್ಷಿಯು ಸ್ವತಃ ನುಡಿಯುತ್ತಾರೆ ಇತ್ತೀಚೆಗೆ ಆ ರೀತಿ ಬೋರ್ಡ್ ಹಾಕಿದ್ದಾರೆ. ದಾವಾ ಪತ್ರದಲ್ಲಿ ಪ್ರತಿವಾದಿ 5 ರಿಂದ 24 ರವರ ವಿಳಾಸವನ್ನು ತೋರಿಸಿದ್ದು, ಕೇರ್ ಆಫ್ ಮಣ್ಣೂರು ಕೊಟ್ಟೂರು ಸ್ವಾಮಿ, ಬಂಡಿಮೋಟೆ ಎಂದು ಹೇಳಲಾಗಿದೆ ಎನ್ನುವುದು ಸರಿ .

**17**. ಸಿದ್ಧಯ್ಯ ಸ್ವಾಮಿ ಮತ್ತು ಭೋಗಯ್ಯ ರವರು ಸೇರಿಕೊಂಡು ಸುಮಾರು 11 ಮಳಿಗೆಗಳನ್ನು ಕಟ್ಟಿದ್ದಾರೆ ಎನ್ನುವುದು ಸರಿ. ಸಾಕ್ಷಿಯು ಸ್ವತಃ ನುಡಿಯುತ್ತಾರೆ ಕಾನೂನು ಬಾಹಿರವಾಗಿ ಕಟ್ಟಿರುತ್ತಾರೆ. ಸದರಿ ಕಟ್ಟಡವನ್ನು ಅವರು ಬಾಡಿಗೆಗೆ ಕೊಟ್ಟು ಬಾಡಿಗೆ ವಸೂಲಿ ಮಾಡುತ್ತಿದ್ದಾರೆ ಎನ್ನುವುದು ಸರಿ . ಐಟಂ ನಂಃ1 ರಲ್ಲಿ ಎಷ್ಟು ಮಳಿಗೆಗಳು ಇವೆ ಮತ್ತು ಅಲ್ಲಿನ ಮಠದ ವಿಸ್ತೀರ್ಣ ಎಷ್ಟು ಎಂದು ದಾವೆಯಲ್ಲಿ ಹೇಳಿಲ್ಲ.

**18**. ದಾವಾ ಆಸ್ತಿಗಳು ಎಂದೂ ಸಹ ಗಡಿಗಿ ವಂಶಸ್ತರ ಸ್ವಾಧೀನದಲ್ಲಿ ಇಲ್ಲ ಎನ್ನುವುದು ಸರಿಯಲ್ಲ. ಮಣ್ಣೂರು ಕೊಟ್ರ ಸ್ವಾಮಿ ಮತ್ತು ಅವರ ವಂಶಸ್ತರು ದಾವಾ ಆಸ್ತಿಯ ಸ್ವಾಧೀನ ಹೊಂದುತ್ತಾ ಬಂದಿದ್ದಾರೆ ಎನ್ನುವುದು ಸರಿಯಲ್ಲ. ನಮ್ಮ ಹಿರಿಯರು ಅಸಲುದಾವೆ ನಂಃ848/1966 ದಾವೆಯಲ್ಲಿ ಪ್ರತಿನಿಧಿಸುತ್ತಾ ಬಂದಿದ್ದು ಸರ್ವೋಚ್ಚ ನ್ಯಾಯಾಲಯದವರಗು ಅವರ ಪರವಾಗಿ ತೀರ್ಪು ಸಿಗದ ಕಾರಣ ಹೇಗಾದರು ಮಾಡಿ ದಾವಾ ಆಸ್ತಿಯನ್ನು ಕಬಳಿಸಬೇಕು ಎಂಬ ಉದ್ದೇಶದಿಂದ ಈ ದಾವೆಯನ್ನು ಹೂಡಿದ್ದೇವೆ ಎನ್ನುವುದು ಸರಿಯಲ್ಲ. ನಾವು ಮತ್ತು ಗಡಿಗಿ ವಂಶಸ್ತರು ಎಂದೂ ಸಹ ಮಠದಲ್ಲಿ ಪೂಜೆ ಪುನಸ್ಕಾರಗಳನ್ನು ಮಾಡಿಲ್ಲ ಎನ್ನುವುದು ಸರಿ .

**ಮರು ವಿಚಾರಣೆ**

**ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)**

**ಓ.ಹೇ.ಕೆ. ಸರಿ ಇದೆ.**

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಬಳ್ಳಾರಿ.**